ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 10/6/20

# ದೇವೇಗೌಡರಿಗಿಂತ ಪತ್ನಿ ಚನ್ನಮ್ಮ ಅವರಿಗೇ ಹೆಚ್ಚು ಆಸ್ತಿ

ಬೆಂಗಳೂರು: ರಾಜ್ಯಸಭೆಗೆ ನಾಮಪತ್ರ ಸಲ್ಲಿಸಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಹೋಲಿಸಿದರೆ ಅವರ ಪತ್ನಿ ಚನ್ನಮ್ಮ ಅವರೇ ಹೆಚ್ಚು ಆಸ್ತಿ ಹೊಂದಿದ್ದಾರೆ. ಚನ್ನಮ್ಮ ಅವರು ಪತಿ, ಪುತ್ರರು, ಪುತ್ರಿಯರು ಹಾಗೂ ಮೊಮ್ಮಗನ ಬಳಿಯೂ ಸಾಲ ಪಡೆದಿದ್ದಾರೆ.

## ಎಚ್.ಡಿ.ದೇವೇಗೌಡ

- ಒಟ್ಟು ಚರ- ಸ್ಥಿರಾಸ್ತಿ ಮೊತ್ತ- 1,13,88,000 ರೂ.
- ಚರಾಸ್ತಿ- 72.60 ಲಕ್ಷ ರೂ.
- ಸ್ಥಿರಾಸ್ತಿ- 41.28 ಲಕ್ಷ ರೂ. • ಸಾಲ- 20,144
- 3 ಅಂಬಾಸಿಡರ್ ಕಾರು, 50,000 ರೂ. ಮೌಲ್ಯದ ಚಿನ್ನ, 61,000 ರೂ. ಪಿಂಚಣಿ, 39,395 ರೂ. ಮೌಲ್ಯದ ಪೀಠೋಪಕರಣ

## ದೇವೇಗೌಡರ ಪತ್ನಿ ಚನ್ನಮ್ಮ

- ಒಟ್ಟು ಚರ- ಸ್ಥಿರಾಸ್ತಿ ಮೊತ್ತ- 7,52,78,496
- ಚರಾಸ್ತಿ- 2,14,07,031 ರೂ. • ಸ್ಥಿರಾಸ್ತಿ- 5,38,71,465
- ಸಾಲ- 97,98,283
- ಚನ್ನಮ್ಮ ಅವರ ಹೆಸರಿನಲ್ಲಿ ಎರಡು ಟ್ರ್ಯಾಕ್ಟರ್, 15 ತೊಲ ಚಿನ್ನ (6.50 ಲಕ್ಷ ರೂ.)
- ಎಚ್.ಡಿ.ಅನುಸೂಯ- 19.20 ಲಕ್ಷ ರೂ., ಎಚ್.ಡಿ. ಬಾಲಕೃಷ್ಣೇಗೌಡ- 7.55 ಲಕ್ಷ ರೂ., ಎಚ್.ಡಿ.ದೇವೇಗೌಡ 6.27 ಲಕ್ಷ ರೂ., ಎಚ್.ಡಿ.ಕುಮಾರಸ್ವಾಮಿ- 1.03 ಲಕ್ಷ ರೂ., ಎಚ್.ಡಿ.ರಮೇಶ್- 9.53 ಲಕ್ಷ ರೂ., ಎಚ್.ಡಿ.ರೇವಣ್ಣ- 15.55 ಲಕ್ಷ ರೂ., ಎಚ್.ಡಿ.ಶೈಲಜಾ- 10.59 ಲಕ್ಷ ರೂ., ಆರ್.ಪ್ರಜ್ವಲ್- 23 ಲಕ್ಷ ರೂ. ಸಾಲವನ್ನು ಚನ್ನಮ್ಮ ಪಡೆದಿದ್ದಾರೆ.

## ಅಶೋಕ್ ಗಸ್ತಿ

- ಚರಾಸ್ತಿ- 2,85,673
- 2 ದ್ವಿಚಕ್ರ ವಾಹನ

## ಸುಮಾ ಗಸ್ತಿ

- ಒಟ್ಟು ಚರ- ಸ್ಥಿರಾಸ್ತಿ ಮೊತ್ತ- 12,45,375 ರೂ.
- ಚರಾಸ್ತಿ- 4,45,375
- ಸ್ಥಿರಾಸ್ತಿ- 8,00,000
- 50 ಗ್ರಾಂ ಚಿನ್ನ, 1 ಕೆ.ಜಿ. ಬೆಳ್ಳಿ

## ಈರಣ್ಣ ಕಡಾಡಿ

- ಒಟ್ಟು ಚರ- ಸ್ಥಿರಾಸ್ತಿ ಮೊತ್ತ- 2,35,62,417
- ಚರಾಸ್ತಿ- 1,02,62,417
- ಸ್ಥಿರಾಸ್ತಿ- 1,33,00,000
- ಸಾಲ- 1,90,000
- ಇನ್ನೋವಾ ಕಾರು, 60 ಗ್ರಾಂ ಚಿನ್ನ

## ಸುಮಿತ್ರಾ ಈರಣ್ಣ ಕಡಾಡಿ

- ಒಟ್ಟು ಚರ- ಸ್ಥಿರಾಸ್ತಿ ಮೊತ್ತ- 20,54,079
- ಚರಾಸ್ತಿ- 9,26,079
- ಸ್ಥಿರಾಸ್ತಿ- 11,28,000
- ಸಾಲ- 1,00,000
- 100 ಗ್ರಾಂ ಚಿನ್ನ

# ಅಭ್ಯರ್ಥಿ ಆಯ್ಕೆಯಲ್ಲಿ ಬಿ.ಎಲ್. ಸಂತೋಷ್ ಪಾತ್ರ

ಬೆಂಗಳೂರು: ರಾಜ್ಯಸಭೆಗೆ ರಾಜ್ಯ ಕೋರ್ ಕಮಿಟಿ ಶಿಫಾರಸು ಮಾಡಿದ್ದ ಸಂಭಾವ್ಯರ ಬದಲಿಗೆ ಸಾಮಾನ್ಯ ಕಾರ್ಯಕರ್ತರನ್ನು ಅಭ್ಯರ್ಥಿಗಳನ್ನಾಗಿ ಮಾಡಿರುವ ಬಗ್ಗೆ ಪಕ್ಷದಲ್ಲಿ ಚರ್ಚೆ ನಡೆಯುತ್ತಿರುವ ಹೊತ್ತಲ್ಲೇ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಪಾತ್ರವಿದೆ ಎಂದು ಸಚಿವ ಸಿ.ಟಿ.ರವಿ ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ.

ವಿಧಾನಸೌಧದಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಸಿ.ಟಿ.ರವಿ, ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಲೂ ಹಿರಿಯರಾದ ಬಿ.ಎಲ್.ಸಂತೋಷ್ ಅವರ ಪಾತ್ರವಿತ್ತು. ರಾಜ್ಯಸಭಾ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ಬಿ.ಎಲ್.ಸಂತೋಷ್ ಅವರ ಪಾತ್ರವಿದೆ. ಅವರು ನಮ್ಮ ರಾಷ್ಟ್ರೀಯ ನಾಯಕರು. ಅವರನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಯಾರು ಅವರನ್ನು ಒಪ್ಪದಿರಲು ಸಾಧ್ಯವಿಲ್ಲ ಎಂದರು. ಯಡಿಯೂರಪ್ಪ ಅವರು ಬಿ.ಎಲ್.ಸಂತೋಷ್ ನಾಯಕತ್ವವನ್ನು ಒಪ್ಪಿಕೊಂಡಿಲ್ಲ ಎಂದು ಹೇಳಿದ್ದಾರೆಯೇ? ಇಬ್ಬರು ಕಾರ್ಯಕರ್ತರನ್ನು ಗುರುತಿಸಿ ಪಕ್ಷದ ಹೈಕಮಾಂಡ್ ಅವಕಾಶ ನೀಡಿದೆ. ಹೈಕಮಾಂಡ್ ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಯಡಿಯೂರಪ್ಪ ಅವರೇ ನಮ್ಮ ನಾಯಕರು. ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸಿದ್ದೇವೆ. ನಾಯಕತ್ವದ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ ಎಂದು ತಿಳಿಸಿದರು.

ನಮ್ಮದು ಕೇಡರ್ ಆಧಾರಿತ ಪಕ್ಷ. ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆ ಎಲ್ಲರಿಗೂ ಅನಿರೀಕ್ಷಿತವಾದುದು. ಈ ನಿರ್ಧಾರ ತೆಗೆದುಕೊಳ್ಳುವ ಮೊದಲು ಮುಖ್ಯಮಂತ್ರಿಗಳು ಹಾಗೂ ರಾಜ್ಯಾಧ್ಯಕ್ಷರೊಂದಿಗೂ ವರಿಷ್ಠರು ಸಮಾಲೋಚಿಸಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಘೋಷಿಸಿದ್ದು ಸಹ ಸಂಸದೀಯ ಮಂಡಳಿ. ಅವರ ನಾಯಕತ್ವದಲ್ಲೇ ಜನ ತೀರ್ಪು ನೀಡಿದ್ದಾರೆ. ಈಗ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾರೆ ಎಂದು ಹೇಳಿದರು.